## ಮುಂದಿನ ವಾರ ಸಭೆ: ಸಚಿವ ಡಾ|ಸುಧಾಕರ್

# ಫೆಬ್ರವರಿಗೆ ಲಸಿಕೆ ನಿರೀಕ್ಷೆ: ಹಂಚಿಕೆಗೆ ರಾಜ್ಯ ಸಿದ್ಧತೆ

## ಮುಂದೆ ಚಳಿಗಾಲ ಬರಲಿದೆ | ಇನ್ನು 3 ತಿಂಗಳು ನಿಮ್ಮನ್ನು ನೀವು ರಕ್ಷಿಸಿಕೊಳ್ಳಿ ಆರೋಗ್ಯ ಇದೆ ಎಂದು ನಿರ್ಲಕ್ಷ್ಯ ಮಾಡಿದರೆ ಪ್ರಾಣಕ್ಕೇ ಅಪಾಯವಾದೀತು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೊರೋನಾಗೆ ಬಹುತೇಕ ಜನವರಿ, ಫೆಬ್ರವರಿ ತಿಂಗಳ ವೇಳೆಗೆ ಲಸಿಕೆ ಬರುವ ವಿಶ್ವಾಸವಿದೆ. ಹೀಗಾಗಿ ಲಸಿಕೆ ಬಂದಕೂಡಲೇ ರಾಜ್ಯದ ಏಳು ಕೋಟಿ ಜನರಿಗೂ ಸಮರೋಪಾದಿಯಲ್ಲಿ ಹೇಗೆ ತಲುಪಿಸಬೇಕು ಎಂಬ ಕುರಿತು ಮುಂದಿನ ವಾರ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ತಜ್ಞರ ಸಭೆ ಕರೆಯುತ್ತೇನೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ. ಸುಧಾಕರ್ ಹೇಳಿದ್ದಾರೆ.



ಇದೇ ವೇಳೆ, ಮುಂದಿನ 3 ತಿಂಗಳು ಚಳಿಗಾಲದಿಂದಾಗಿ ಸೋಂಕು ಉಲ್ಬಣಿಸುವ ಸಾಧ್ಯತೆ ಇದೆ. ಜೊತೆಗೆ ಕೊರೋನಾಗೆ ಲಸಿಕೆ ಬರಲು ಕನಿಷ್ಠ 3 ತಿಂಗಳು ಕಾಲಾವಕಾಶ ಬೇಕು. ಹೀಗಾಗಿ ನಿಮ್ಮನ್ನು ನೀವು 3 ತಿಂಗಳು ರಕ್ಷಣೆ ಮಾಡಿಕೊಳ್ಳಬೇಕು. ನಿಮ್ಮ ಮನೆಯಲ್ಲಿನ ವಯೋವೃದ್ಧರು ಹಾಗೂ ಮಕ್ಕಳನ್ನು ರಕ್ಷಣೆ ಮಾಡಿಕೊಳ್ಳಿ ಎಂದು ಸಲಹೆ ನೀಡಿದ್ದಾರೆ.

**ಲಸಿಕೆ ವಿಶ್ವಾಸ:** ವಿಧಾನಸೌಧದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಜನವರಿ ತಿಂಗಳಲ್ಲಿ ಲಸಿಕೆ ಬರುವ ವಿಶ್ವಾಸವಿದೆ. ಈ ಬಗ್ಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಆರೋಗ್ಯ ಸಚಿವರು ಭರವಸೆ ನೀಡಿದ್ದಾರೆ.

➘ 7



### ಬಿಸಿ ನೀರ ಹಬೆ ತೆಗೆದುಕೊಳ್ಳಿ

**ಚಳಿಗಾಲದಲ್ಲಿ** ಸೋಂಕಿನಿಂದ ರಕ್ಷಣೆ ಪಡೆಯಲು ಆಯುಷ್ ವೈದ್ಯರು 'ಬಿಸಿ ನೀರಿನಿಂದ ಆವಿ' ತೆಗೆದುಕೊಳ್ಳುವಂತೆ ಸಲಹೆ ನೀಡಿದ್ದಾರೆ. ಇದರಿಂದ ಮೂಗು ಹಾಗೂ ಗಂಟಲಿನಲ್ಲಿರುವ ಕಫ ಹೊರಗೆ ಹೋಗುತ್ತದೆ. 50ರಿಂದ 60 ಡಿಗ್ರಿ ಸೆಲ್ಸಿಯಸ್‌ನಲ್ಲಿ ವೈರಸ್ ನಿಷ್ಕ್ರಿಯವಾಗುತ್ತದೆ. ಈ ನಿಟ್ಟಿನಲ್ಲಿ ಮೂಗಿನಿಂದ ಬಿಸಿ ನೀರಿನ ಆವಿ ತೆಗೆದುಕೊಳ್ಳುವುದು ದೊಡ್ಡ ಆಶಾ ಕಿರಣ ಎಂದು ಸುಧಾಕರ್ ತಿಳಿಸಿದ್ದಾರೆ. ಈ ವೇಳೆ, ಪುದಿನ ಅಥವಾ ತುಳಸಿ ಎಲೆ ನೀರಿಗೆ ಹಾಕಿ ಕುದಿಸಿದರೆ ಉತ್ತಮ. ಯುನಾನಿಯಲ್ಲಿ ಅರ್ಕ್ ಅಜೀಬ್ ಎಂಬ ಔಷಧಿಯಿದ್ದು, ಅದನ್ನು ಎರಡು ಹನಿ ನೀರಿಗೆ ಹಾಕಿಕೊಂಡು ಸಹ ಆವಿ ಪಡೆಯಬಹುದೆಂದು ಆಯುಷ್ ಇಲಾಖೆ ವೈದ್ಯರೊಬ್ಬರು ಮಾಹಿತಿ ನೀಡಿದ್ದಾರೆ.

### ರಾಜ್ಯದಲ್ಲಿ ಸೋಂಕು ಇಳಿಕೆ

**ಬೆಂಗಳೂರು:** ರಾಜ್ಯದಲ್ಲಿ 1 ತಿಂಗಳಿಂದ ಕೊರೋನಾ ಪರೀಕ್ಷೆ ಶೇ.73 ಹೆಚ್ಚಿದ್ದರೂ, 1 ವಾರದಿಂದ ಹೊಸ ಕೇಸ್ ಸಂಖ್ಯೆ ಇಳಿಯುತ್ತಿದೆ. ಅ.10ಕ್ಕೆ 11000ದಷ್ಟಿದ್ದ ನಿತ್ಯ ಪ್ರಕರಣಗಳು ಈಗ 5000ಕ್ಕೆ ಇಳಿದಿವೆ. ಇದೇ ವೇಳೆ, ಸಾವಿನ ಪ್ರಮಾಣವೂ ಶೇ.1.37ರಷ್ಟಿದ್ದು, ಇದನ್ನು ಶೇ.1ಕ್ಕಿಂತ ಕಡಿಮೆ ಮಾಡುವುದು ನಮ್ಮ ಗುರಿ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ. ವಿವರ ➘ 4

### ಸಾವು 3 ತಿಂಗಳಲ್ಲೇ ಕನಿಷ್ಠ

**ನವದೆಹಲಿ:** ಕೊರೋನಾ ಸೋಂಕಿನ ತೀವ್ರತೆ ದೇಶದಲ್ಲಿ ಇಳಿಮುಖವಾಗುತ್ತಿರುವ ಲಕ್ಷಣಗಳು ಗೋಚರಿಸುತ್ತಿವೆ. ಸೋಮವಾರ 600ಕ್ಕಿಂತ ಕಡಿಮೆ ಸಾವು ವರದಿಯಾಗಿದ್ದು, ಈ ರೀತಿ ಆಗುತ್ತಿರುವುದು ಕಳೆದ 3 ತಿಂಗಳಲ್ಲಿ ಇದೇ ಮೊದಲು. ಇದೇ ವೇಳೆ, ಸೋಮವಾರ 60000ಕ್ಕಿಂತ ಕಡಿಮೆ ಪ್ರಕರಣ ದಾಖಲಾಗಿದ್ದು, ಈ ತಿಂಗಳಲ್ಲಿ ಈ ರೀತಿ ಆದದ್ದು ಇದು ಎರಡನೇ ಬಾರಿ.

ವಿವರ ➘ 9

### ಲಸಿಕೆಗೆ ಫಾರ್ಮಸಿ ಸಿಬ್ಬಂದಿ?

**ನವದೆಹಲಿ:** ಕೊರೋನಾ ಸೋಂಕು ತಡೆಯುವ ಲಸಿಕೆ ಬಿಡುಗಡೆಯಾದ ಬಳಿಕ ಅವುಗಳನ್ನು ದೇಶಾದ್ಯಂತ ಜನರಿಗೆ ನೀಡಲು ಭಾರೀ ಸಂಖ್ಯೆಯ ಸಿಬ್ಬಂದಿ ಬೇಕಾಗುತ್ತದೆ. ಇದಕ್ಕಾಗಿ ದೇಶಾದ್ಯಂತ ಇರುವ ಮೆಡಿಕಲ್ ಸ್ಟೋರ್‌ಗಳ ಸಿಬ್ಬಂದಿಗೆ (ಫಾರ್ಮಸಿಸ್ಟ್‌ಗಳು) ತರಬೇತಿ ನೀಡಿ ಅವರನ್ನು ಲಸಿಕೆ ನೀಡುವ ಕಾರ್ಯಕ್ಕೆ ಬಳಸಿಕೊಳ್ಳುವ ಸಾಧ್ಯತೆ ಇದೆ ಎಂದು ಪತ್ರಿಕೆಯೊಂದು ವರದಿ ಮಾಡಿದೆ.

ವಿವರ ➘ 9